ಶ್ರೀ ಬಿ.ಎಸ್.ಯಡಿಯೂರಪ್ಪ : ಈ ಒಂದು ಪರಿಸ್ಥಿತಿಯಲ್ಲಿ ಜನರ ಹಿತದೃಷ್ಟಿಯಿಂದ ವಿಧಾನಸಭೆಯನ್ನ ವಿಸರ್ಜಿಸಿ ಆದಷ್ಟು ಬೇಗ ಚುನಾವಣಾ ಕಣಕ್ಕೆ ಹೋಗುವುದಕ್ಕೆ ನೀವು ತೀರ್ಮಾನ ತೆಗೆದುಕೊಳ್ಳಬೇಕು. ಇದರ ಬಗ್ಗೆ ಮಾನ್ಯ ಹಿರಿಯ ಸಚಿವರುಗಳಾದ ಫೋರ್ಪಡೆಯವರು ಮತ್ತು ಹಾರನ್ಹಳ್ಳಿ ರಾಮಸ್ವಾಮಿಯವರು ಸರಿಯಾದ ಸಲಹೆ ಕೊಡಬೇಕು. ಅಥವಾ 'ನಾವು ನಿಮ್ಮನ್ನೆಲ್ಲಾ ಜೊತೆಗೆ ತೆಗೆದುಕೊಂಡು' ಹೋಗುವುದಕ್ಕೆ ಪ್ರಯತ್ನಿಸಿದೆವು, ಆದರೆ ಇವ್ಹೊತ್ತು ನಾವು ಜನರಿಗೆ ಒಳ್ಳೆಯ ಕೆಲಸ ಮಾಡುವುದಕ್ಕಾಗಲಿಲ್ಲ, ಆದಕಾರಣ ಆದಷ್ಟು ಬೇಗ ಚುನಾವಣಾ ಕಣಕ್ಕೆ ಹೋಗುವುದೊಳ್ಳೆಯದು. ಎಂದು ನಿಮ್ಮ ಸದಸ್ಯರ ಮನವೊಲಿಸಿ ಜನರ ಹಿತದೃಷ್ಟಿಯಿಂದ ವಿಧಾನಸಭೆಯನ್ನು ವಿಸರ್ಜಿಸು'ವುದಕ್ಕೆ ತೀರ್ಮಾನ ತೆಗೆದುಕೊಳ್ಳಿ. ಜನರು ನಿಮಗೆ ಅಜೀರ್ಣವಾಗುವಷ್ಟು ಬಹುಮತ ನೀಡಿರುವುದಕ್ಕಾದರೂ ಅವರಿಗೆ ಉಪಕಾರ ಮಾಡಬೇಕೆಂದು ಪ್ರಾರ್ಥಿಸಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶಾಸನರಚನಾ ಕಾರ್ಯಕಲಾಪಗಳು

1993ರ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹಾರನ್ಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಉಪಾಧ್ಯಕ್ಷರೆ, ಮುಖ್ಯಮಂತ್ರಿಗಳ ಪರವಾಗಿ 1993 ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನ್ನು ಮಂಡಿಸಲಾಯಿತು

ಹಾರನ್ಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಈ ಪ್ರವೇಶ ತೆರಿಗೆಯನ್ನು ಕರ್ನಾಟಕದಲ್ಲಿ ದಿನಾಂಕ 1.5.92 ರಲ್ಲಿ ಜಾರಿಗೆ ತರಲಾಯಿತು. ಇದಾದ ನಂತರ ಕೈಗಾರಿಕೆಗಳವರು ಮತ್ತು ವಹಿವಾಟಗಾರರು ಇದರಿಂದ ತುಂಬಾ ತೊಂದರೆಯಾಗಿದೆಯೆಂದು ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಫೆಡರೇಷನ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ನ ಸಭೆಯನ್ನು ಸರ್ಕಾರದ ಪ್ರತಿನಿಧಿಗಳು ಕರೆದು, ಇದರ ಬಗ್ಗೆ ವಿಪುಲವಾಗಿ ಚರ್ಚೆ ಮಾಡಿ ಸೌಹಾರ್ದಯುತವಾದ ವಾತಾವರಣವನ್ನು ತರಬೇಕು ಎನ್ನತಕ್ಕ ದೃಷ್ಟಿಯಿಂದ ಒಂದು ಒಪ್ಪಂದಕ್ಕೆ ಬಂದರು. ಇದರ ಪರಿಣಾಮವಾಗಿ ಮತ್ತು ಕೆಲವು ಬದಲಾವಣೆಗಳನ್ನು ಮಾಡುವುದಕ್ಕೋಸ್ಕರ ಈ ತಿದ್ದುಪಡಿಯನ್ನು ತರಲಾಗಿದೆ. ಆ ತಿದ್ದುಪಡಿಯ ಮುಖ್ಯಾಂಶಗಳೇನೆಂದರೆ, 5 ಕೋಟಿಗಿಂತ ಹೆಚ್ಚು ವಹಿವಾಟು ಇರತಕ್ಕ ವಹಿವಾಟುದಾರರು ಟರ್ನ್ಓವರ್ ಮೇಲೆ ಶೇಕಡ ಎರಡೂವರೆಯಷ್ಟು ತೆರಿಗೆಯನ್ನು ಇದುವರೆಗೆ ಕೊಡುತ್ತಿದ್ದರು. ಅದನ್ನು ಈಗ ಶೇಕಡ ಎರಡೂಮುಕ್ಕಾಲಿಗೆ ಬದಲಾವಣೆ ಮಾಡಬೇಕೆಂದು ತೀರ್ಮಾನವನ್ನು ಮಾಡಲಾಗಿದೆ. ಮತ್ತು ಇದುವರೆಗೆ 80 ವಸ್ತುಗಳ ಮೇಲೆ ಈ ತೆರಿಗೆ ಇತ್ತು. ಅವರ ಜೊತೆ

ಮಾಡಿ ಆದ ಒಪ್ಪಂದದ ಪ್ರಕಾರ 80 ವಸ್ತುಗಳ ಬದಲು 8 ವಸ್ತುಗಳಿಗೆ ಮಾತ್ರ ಪ್ರವೇಶ ತೆರಿಗೆಯನ್ನು ಹಾಕಿ ಬಾಕಿ 72 ವಸ್ತುಗಳಿಗೆ ವಿನಾಯಿತಿ ನೀಡಲಾಗಿದೆ. ಇದರ ಪರಿಣಾಮದಿಂದ ಸರ್ಕಾರಕ್ಕೆ ಸುಮಾರು 100 ಕೋಟಿ ರೂಪಾಯಿಗಳು ನಷ್ಟವಾಗುತ್ತದೆ. ಇದನ್ನು ಭರಿಸಲು ನೂರಕ್ಕೆ ಹದಿನೈದು ಭಾಗ ತೆರಿಗೆ ಸರ್ಚಾರ್ಜ್ ಹಾಕಬೇಕೆಂದು ತಿದ್ದುಪಡಿಯಲ್ಲಿ ಸೇರಿಸಿದೆ. ಇದರಿಂದ 1992ರಲ್ಲಿ ಏನು ಪ್ರವೇಶ ತೆರಿಗೆಯಿಂದ ಆದಾಯ ಬರುತ್ತಿತ್ತೋ ಅಷ್ಟೇ ಆದಾಯ ಈಗ ಬರುತ್ತದೆ, ಕಡಿಮೆಯೂ ಆಗುವುದಿಲ್ಲ. ಜಾಸ್ತಿಯೂ ಆಗುವುದಿಲ್ಲ. ಇದರಿಂದ ವ್ಯಾಪಾರ ವಹಿವಾಟುದಾರರಿಗೆ ಇದ್ದಂಥ ಕಿರುಕುಳವನ್ನು ತಪ್ಪಿಸಲಾಗಿದೆ. ಆದ್ದರಿಂದ ಈ ತಿದ್ದುಪಡಿ ಮಸೂದೆಗೆ ಈ ಸಭೆಯು ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಾನೂನು ಸಚಿವರು ಏನು ಈ ಸಭೆಯ ಮುಂದೆ ಮಾರಾಟ ತೆರಿಗೆ ತಿದ್ದುಪಡಿ ವಿಧೇಯಕ 1993ನ್ನು ಇಟ್ಟಿದ್ದಾರೆ, ಆ ತಿದ್ದುಪಡಿ ವಿಧೇಯಕದಲ್ಲಿ ಅವರು ಹೇಳಿದಂತೆ ಪ್ರಕರಣ 6ಬಿಯಲ್ಲಿ ಏನು ಸುಮಾರು 500 ಲಕ್ಷ ವಹಿವಾಟು ಮಾಡುವ ವಹಿವಾಟುದಾರರ ಮೇಲೆ ಶೇಕಡ ಎರಡೂವರೆಯಷ್ಟು ತೆರಿಗೆ ಇದ್ದುದನ್ನು ಎರಡೂಮುಕ್ಕಾಲಿಗೆ ಹೆಚ್ಚಿಸಿರುವುದಾಗಿ ಹೇಳಿದ್ದಾರೆ. ಅದಕ್ಕೆ ನಮ್ಮ ವಿರೋಧವೇನಿಲ್ಲ. ಮತ್ತೆ ಅವರು ಈ ಹೆಚ್ಚಿನ ತೆರಿಗೆಯನ್ನು ಕೊಡಲು ಒಪ್ಪಿದ್ದಾರೆಂದು ಹೇಳಿದ್ದಾರೆ. ನಾನು ಅವರಿಂದ ಒಂದು ಸ್ಪಷ್ಟವಾದ ವಿವರವನ್ನು ಹೇಳಬಯಸುವುದೇನೆಂದರೆ, ಪ್ರವೇಶ ತೆರಿಗೆಯನ್ನು 80 ವಸ್ತುಗಳ ಬದಲು ಕೇವಲ 8ಕ್ಕೆ ಮಾತ್ರ ಮಿತಿಗೊಳಿಸಿರುವುದಾಗಿ ಹೇಳಿದ್ದೀರಿ. ಹಾಗಾದರೆ ಮೊದಲು ಆ 80 ಸರಕುಗಳಿಂದ ಪ್ರವೇಶ ತೆರಿಗೆ ಎಷ್ಟು ಬರುತ್ತಿತ್ತು, ಈಗ ತಾವು ಏನು ಕೇವಲ 8 ಸರಕುಗಳನ್ನು ಬಿಟ್ಟು ಉಳಿದ 72 ವಸ್ತುಗಳಿಗೆ ತೆರಿಗೆಯಲ್ಲಿ ವಿನಾಯಿತಿ ಗೊಳಿಸಿದ್ದರಿಂದ, ಮತ್ತು ಈ ರೀತಿಯಾಗಿ 6ಸಿ ಪ್ರಕರಣದಂತೆ, ಅಂದರೆ ಸೆಕ್ಷನ್ 5, 5ಎ,ಬಿ,ಸಿ ಮತ್ತು 6ರ ಪ್ರಕರಣದ ಅಡಿಯಲ್ಲಿ ನೀವು ಮಾರಾಟದ ತೆರಿಗೆಯನ್ನು ಎಷ್ಟು ವಸೂಲಿ ಮಾಡುತ್ತಿದ್ದೀರಿ ಮತ್ತು ಈಗ ಶೇಕಡ 15ರಷ್ಟು ಅದಿಭಾರವನ್ನು ಅಂದರೆ ಸರ್‌ಛಾರ್ಜ್ ಹಾಕುವುದರ ಮೂಲಕ ಅದನ್ನು ಸರಿದೂಗಿಸಲು ಪ್ರಯತ್ನ ಮಾಡುತ್ತಿದ್ದೇವೆ ಎನ್ನತಕ್ಕ ಮಾತನ್ನು ಹೇಳಿದ್ದೀರಿ. ಹಾಗಾದರೆ ನಾನು ತಮ್ಮಿಂದ ತಿಳಿಯಬಯಸುವುದೇನೆಂದರೆ, ತಮಗೆ ಪ್ರವೇಶ ತೆರಿಗೆಯಿಂದ ಆದಂಥ ನಷ್ಟವೆಷ್ಟು? ಮತ್ತು ಸೆಕ್ಷನ್ 5ಸಿಯಲ್ಲಿ ಏನು ಹೊಸ ಅದಿಭಾರವನ್ನು ಹಾಕುತ್ತಿದ್ದೀರಿ, ಅದರಿಂದ ಎಷ್ಟು ಹಣ ಬರುತ್ತದೆ ಹಾಗೂ ಅದು ಎಷ್ಟರಮಟ್ಟಿಗೆ ಸರಿಯಾಗಿದೆ ಎಂಬುದನ್ನು ನಾನು ಕೇಳಬಯಸುತ್ತೇನೆ? ಇವತ್ತು ಅವರ ಒಪ್ಪಿಗೆಯ ಮೂಲಕ ಈ ಒಂದು ತಿದ್ದುಪಡಿಯನ್ನೇನು ತಂದಿದ್ದೀರಿ ಅದಕ್ಕೆ ನಮ್ಮ ವಿರೋಧವೇನಿಲ್ಲ ಎನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ. ?ಆದರೆ ನಾನು ಕೇಳಿದ ಈ ವಿವರವನ್ನು ಸದನದ ಮುಂದಿಡಬೇಕೆಂದು ಕೇಳುವ ಮೂಲಕ ಈ ತಿದ್ದುಪಡಿ ಮಸೂದೆಗೆ ನನ್ನ ಆಕ್ಷೇಪಣೆ ಇಲ್ಲವೆಂದು ನಮ್ಮ ಪಕ್ಷದ ಪರವಾಗಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಈ 72 ವಸ್ತುಗಳಿಗೆ ಪ್ರವೇಶ ತೆರಿಗೆಯನ್ನು ತೆಗೆದಿದ್ದರಿಂದ ಸರ್ಕಾರಕ್ಕೆ ಸುಮಾರು 100ಕೋಟಿ ನಷ್ಟವಾಗುತ್ತದೆ. ಇದನ್ನು ತುಂಬುವುದಕ್ಕೋಸ್ಕರ ಪ್ರವೇಶ ತೆರಿಗೆಯನ್ನು ಶೇಕಡ ಎರಡೂವರೆಯಿಂದ ಎರಡೂಮುಕ್ಕಾಲಿಗೆ ನಿಗದಿ ಮಾಡಿರುವುದು. ಮತ್ತು ಸರ್‌ಛಾರ್ಜ್ 15 ಪರ್ಸೆಂಟ್ ನಿಗದಿ ಮಾಡಿರುವುದರಿಂದ ಆ ನೂರು ಕೋಟಿ, ಪೂರ್ತಿ ಭರ್ತಿಯಾಗುತ್ತದೆ. ಸರ್ಕಾರಕ್ಕೆ ಇದರಿಂದ ಹೆಚ್ಚಿನ ಆದಾಯ ಮಾಡುವುದಕ್ಕೆ ಈ ವಿಧೇಯಕವನ್ನು

ತಂದಿಲ್ಲ. ಸರ್ಕಾರಕ್ಕೆ ಆಗುತ್ತಿರುವ ನಷ್ಟವನ್ನು ತುಂಬಿಕೊಳ್ಳಲು ಮತ್ತು ವ್ಯಾಪಾರವಹಿವಾಟುಗಾರರಿಗೆ, ಮತ್ತು ಅವರುಗಳು ಅಕೌಂಟ್ಗಳನ್ನು ಬರೆದುಕೊಳ್ಳಲು ಅನುಕೂಲವನ್ನು ಮಾಡಿಕೊಡುವುದಕ್ಕೋಸ್ಕರ ಈ ರೀತಿ ಮಾಡಿದ್ದೇವೆ. ಆದ್ದರಿಂದ ಈ ವಿಧೇಯಕಕ್ಕೆ ಸಭೆಯು ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "1993ರ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಉಪಾಧ್ಯಕ್ಷರು : "ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಕ್ಕೆ ತಿದ್ದುಪಡಿ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

ಮಾನ್ಯ ಉಪಾಧ್ಯಕ್ಷರೇ, ಖಂಡ 1ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"1993ರ ಸೆಪ್ಟೆಂಬರ್ 1ನೇ ತಾರೀಖಿನಿಂದ ಜಾರಿಗೆ ಬರತಕ್ಕದ್ದು" ಎನ್ನುವುದರ ಬದಲು "ಈ ತಕ್ಷಣದಿಂದ" ಎಂದು ಸೇರಿಸುವುದು"

ಉಪಾಧ್ಯಕ್ಷರು : ಪ್ರಶ್ನೆ ಏನೆಂದರೆ :

"1993ರ ಸೆಪ್ಟೆಂಬರ್ 1ನೇ ತಾರೀಖಿನಿಂದ ಜಾರಿಗೆ ಬರತಕ್ಕದ್ದು" ಎನ್ನುವುದರ ಬದಲು "ಈ ತಕ್ಷಣದಿಂದ" ಎಂದು ಸೇರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 1 ಇತ್ಯಾದಿ ತಿದ್ದುಪಡಿಯಾದ ರೂಪದಲ್ಲಿ :

ಉಪಾಧ್ಯಕ್ಷರು : ಪ್ರಶ್ನೆ ಏನೆಂದರೆ :

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ತಿದ್ದುಪಡಿಯಾದ ರೂಪದಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ, ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ತಿದ್ದುಪಡಿಯಾದ ರೂಪದಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ (ಮುಖ್ಯಮಂತ್ರಿಗಳ ಪರವಾಗಿ) 1993ರ ಕರ್ನಾಟಕ

ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾಗಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, "1993ರ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು, ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ತಿದ್ದುಪಡಿಯಾದ ರೂಪದಲ್ಲಿ ಒಪ್ಪಿಗೆ ನೀಡಲಾಯಿತು

1993ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ (ಮೂರನೆ ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹಾರನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, 1993ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ (ಮೂರನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಮುಖ್ಯಮಂತ್ರಿಗಳ ಪರವಾಗಿ ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಹಾರನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಈ ಒಂದು ತಿದ್ದುಪಡಿ ವಿಧೇಯಕದ ಸಾರಾಂಶ ಏನಿದೆಯೆಂದರೆ, ಮಾರಾಟ ತೆರಿಗೆ ಅಧಿಕಾರ ವರ್ಗದವರು, ಆಸೆಸಿಂಗ್ ಅಥಾರಿಟಿ, ತೆರಿಗೆಯನ್ನು ವಸೂಲು ಮಾಡತಕ್ಕಂತಹ ಅಧಿಕಾರವರ್ಗದವರು ಈ ಪ್ರವೇಶ ತೆರಿಗೆಯ ವಸೂಲು ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ ಎನ್ನುವ ಕಲಮನ್ನು ಸೇರಿಸುವುದು ಮೊದಲನೇ ಭಾಗ. ಎರಡನೆಯದು, ರಾಷ್ಟ್ರದ ನಮ್ಮ ಡಿಫೆನ್ಸ್ ಯುನಿಟ್ಸ್ ರಾಷ್ಟ್ರದ ರಕ್ಷಣಾ ಕೇಂದ್ರಗಳಿಗೆ ಈ ಪ್ರವೇಶ ತೆರಿಗೆ ಯಾವುದೂ ಅನ್ವಯಿಸಬಾರದು ಎಂದು ಅವರಿಗೆ ಮನ್ನಾ ಮಾಡತಕ್ಕದ್ದು 2ನೇ ಭಾಗ. ಈ 72 ವಸ್ತುಗಳ ಮೇಲೆ ಪ್ರವೇಶ ತೆರಿಗೆಯನ್ನು ರದ್ದು ಮಾಡುವುದರಿಂದ ಆಗಬಹುದಾದಂತಹ ಕೆಲವು ಬದಲಾವಣೆಗಳನ್ನು ಇದರಲ್ಲಿ ಆಳವಡಿಸಲಾಗಿದೆ. ಮತ್ತು ಇನ್ನೂ ಕೆಲವು ದೋಷಗಳು ಹಿಂದಿನ ಕಾನೂನಿನಲ್ಲಿ ಇತ್ತು. ಅದನ್ನು ಈಗಾಗಲೇ ಸರ್ಕಾರ ಕ್ರಮ ಕೈಗೊಂಡಿತರಕ್ಕಂತಹ ಅಂಶಗಳಲ್ಲಿ ಇದನ್ನು ನ್ಯಾಯಬದ್ಧ ಮಾಡುವುದಕ್ಕೋಸ್ಕರವಾಗಿ ಕೆಲವು ತಿದ್ದುಪಡಿಗಳನ್ನು ಸೂಚನೆ ಮಾಡಲಾಗಿದೆ. ಈ ವಿಧೇಯಕ ಮಾರಾಟ ತೆರಿಗೆ ವಿಧೇಯಕದ ಒಂದು ಭಾಗವಾಗಿದೆ. ಅದನ್ನು ಸಫಲವಾಗಿ ಆಚರಣೆಗೆ ತರುವುದಕ್ಕೋಸ್ಕರ ಈ ವಿಧೇಯಕವರನ್ನು ತರಲಾಗಿದೆ. ಆದ್ದರಿಂದ ಈ ಮಾನ್ಯ ಸಭೆ ಇದನ್ನು ಒಪ್ಪಬೇಕು ಎಂದು ಕೇಳಿ ಕೊಳ್ಳುತ್ತೇನೆ.

+ ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಸರಕುಗಳ ಮೇಲಣ ತೆರಿಗೆಯ ತಿದ್ದುಪಡಿ ವಿಧೇಯಕ ಏನಿದೆ, ಈ ವಿಧೇಯಕಕ್ಕೆ ಕೆಲವು ತಾಂತ್ರಿಕವಾದಂತಹ ತಿದ್ದುಪಡಿಗಳನ್ನು ಸರ್ಕಾರದವರು ತಂದಿದ್ದಾರೆ. ಯಾವ ತಾಂತ್ರಿಕವಾದಂತಹ ತಿದ್ದುಪಡಿಗಳನ್ನು ತಂದಿದ್ದಾರೆ ಅವುಗಳಿಗೆ ನಮ್ಮ ಆಕ್ಷೇಪ ಇಲ್ಲ. ಮತ್ತೊಂದು ರಕ್ಷಣಾ ದಳದ ಮತ್ತು ರಕ್ಷಣಾ ದಳಕ್ಕೆ ಸಂಬಂಧಿಸಿದ ಸರಕುಗಳ ತಯಾರಿಕೆ, ದುರಸ್ತಿ ಮತ್ತು ಸಂಶೋಧನೆ ಬಗ್ಗೆ ಮತ್ತು ಅಭಿವೃದ್ಧಿಯಲ್ಲಿ ಏನು ಅದನ್ನು ಉಪಯೋಗಿಸುತ್ತಿದ್ದಾರೋ ಅಂತಹ ಸರಕುಗಳಿಗೆ ಈ ಒಂದು ಪ್ರವೇಶ ತೆರಿಗೆಯಿಂದ ವಿನಾಯತಿ ಕೇಳಿದ್ದಾರೆ. ಅದಕ್ಕೂ ಸಹ ನಾನು ಆಕ್ಷೇಪವನ್ನು ವ್ಯಕ್ತ ಮಾಡುವುದಿಲ್ಲ. ಆದರೆ ಒಂದು ಪ್ರಕರಣವನ್ನು ಕೈಬಿಟ್ಟಿದ್ದಾರೆ. ಅದು 5 ಸಿ. ಏನೆಂದರೆ, ಕಾಂಪೊಜಿಷನ್ ಆಫ್ ಟ್ಯಾಕ್ಸ್. ಇದರ ಅಡಿಯಲ್ಲಿ ಈವರೆಗೆ ಸುಮಾರು 80